## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ

**ಸಿ.ಸಿ ನಂ: 903/2018**

| ಪಿರ್ಯಾದಿದಾರರು: | ವಿರುದ್ಧ | ಆರೋಪಿತರು: |
|---|---|---|
| ಶಿವಾನಂದ ಹೆಚ್.ಸಿ., ತಂದೆ ಲೇಟ್ ಚಂದ್ರಪ್ಪ, 44 ವರ್ಷ, ವಾಸ: ಅಮರಾವತಿ, ಹರಿಹರ. | | ಜಿ. ನಿಂಗಪ್ಪ , 45 ವರ್ಷ, ಸಿಪಿಸಿ 2214 ಪ ಪೋಲಿಸ್ ಕಾನಸ್ಟೇಬಲ್, ಹೊಸದುರ್ಗ ಟೌನ್ ಪೋಲಿಸ್ ಸ್ಟೇಷನ್, ಹೊಸದುರ್ಗ, ಚಿತ್ರದುರ್ಗ. |

**ದಂಡಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ 1 : ನ್ಯಾಯಾಲಯದ ಮುಂದೆ ಪಿರ್ಯಾದುದಾರರ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ ?

ಉತ್ತರ:

ಪ್ರಶ್ನೆ 2: ಪ್ರಾಸಾ.1 ಶಿವಾನಂದ ಹೆಚ್.ಸಿ., ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 15.01.2018 ರಂದು ಆರೋಪಿತರಾದ ನೀವು ಮನೆತನದ ಅವಶ್ಯಕತೆಗಾಗಿ ಪಿರ್ಯಾದುದಾರರ ಹತ್ತಿರ ರೂ. 3,00,000/ ಗಳನ್ನು ಕೈಗಡ ಸಾಲವಾಗಿ ಪಡೆದಿದ್ದು, ಸದರಿ ಸಾಲವನ್ನು 3 ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿರುತ್ತೀರೆಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ :

ಪ್ರಶ್ನೆ 3 : ಪ್ರಾಸಾ.1 ಶಿವಾನಂದ ಹೆಚ್.ಸಿ., ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ಸದರಿ ಸಾಲದ ಮರುಪಾವತಿಗಾಗಿ ನಿಮ್ಮ ಖಾತೆಯನ್ನು ಹೊಂದಿದ್ದ ಕರ್ನಾಟಕ ಬ್ಯಾಂಕ್, ಹರಿಹರ ಶಾಖೆಗೆ ಸಂಬಂಧಿಸಿದ ಚೆಕ್ ನಂ. 285411 ನಲ್ಲಿ ರೂ.3,00,000/ ಎಂದು ಬರೆದು ಸಹಿ ಮಾಡಿ ದಿನಾಂಕ: 07.08.2018 ಕ್ಕೆ ಬ್ಯಾಂಕಿಗೆ ಹಾಜರುಪಡಿಸುವಂತೆ ಸೂಚಿಸಿ ಸದರಿ ಚೆಕ್ ನ್ನು ಪಿರ್ಯಾದುದಾರರಿಗೆ ನೀಡಿರುತ್ತೀರೆಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ :

ಪ್ರಶ್ನೆ 4 : ಪ್ರಾಸಾ.1 ಶಿವಾನಂದ ಹೆಚ್.ಸಿ., ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ನೀಡಿದ್ದ ಪೋಸ್ಟ್ ಡೇಟೇಡ್ ಚೆಕ್ ನ್ನು ಪಿರ್ಯಾದುದಾರರು ತಮ್ಮ ಖಾತೆಯನ್ನು ಹೊಂದಿದ್ದ ಪ್ರಗತಿ

ಕೃಷ್ಣ ಗ್ರಾಮೀಣ ಬ್ಯಾಂಕ್, ಹರಿಹರ ಶಾಖೆಯಲ್ಲಿ ದಿನಾಂಕ 07.08.2018 ರಂದು ಹಾಜರುಪಡಿಸಿದಾಗ , ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಷರಾದೊಂದಿಗೆ ದಿನಾಂಕ 08.08.2018 ರಂದು ಹಿಂತಿರುಗಿರುತ್ತದೆಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ : ಸುಳ್ಳು

ಪ್ರಶ್ನೆ 5 : ಫ್ರಾಸಾ.1 ಶಿವಾನಂದ ಹೆಚ್.ಸಿ., ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ: 20.08.2018 ರಂದು ಆರೋಪಿತರಾದ ನಿಮಗೆ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ನೋಟೀಸ್ ನೀಡಿದ್ದು, ಸದರಿ ನೋಟೀಸ್ ನಿಮಗೆ ತಲುಪಿದ ನಂತರವೂ ನೀವು ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಹಾಗೂ ಸಾಲದ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ : ಸುಳ್ಳು

ಪ್ರಶ್ನೆ 6 : ನೀವು ಏನನ್ನಾದರೂ ಹೇಳಬಯಸುವಿರಾ ?

ಉತ್ತರ : ಇಲ್ಲ

ಪ್ರಶ್ನೆ 7 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ : [illegible]

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕ: 22-07-2022

ಸ್ಥಳ: ಹರಿಹರ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ., ನ್ಯಾಯಾಲಯ,

ಹರಿಹರ.